

ನಿನ್ನನ್ನು ಕಂಡು, ನಿನ್ನೊಡನೆ ನಾನು ಮಾತನಾಡಿದಂತೆ ದೇವರನ್ನು ಕಂಡು ಅವರೊಡನೆ ಮಾತನಾಡಬಹುದು. ಆದರೆ ದೇವರು ಯಾರಿಗೆ ಬೇಕಾಗಿದೆ? ಜನರು ತಮ್ಮ ಪತ್ನಿ ಮಕ್ಕಳಿಗಾಗಿ, ಹಣ ಮತ್ತು ಆಸ್ತಿಗಾಗಿ ಬೇಕಾದಷ್ಟು ಅಳುತ್ತಾರೆ, ಆಸಕ್ತರಾಗುತ್ತಾರೆ. ಆದರೆ ಅಷ್ಟೇ ತೀವ್ರವಾಗಿ ದೇವರಿಗಾಗಿ ಯಾರು ವ್ಯಾಕುಲತೆಯಿಂದ ಅಳುತ್ತಾರೆ? ದೇವರಿಗಾಗಿ ಯಾರು ಪ್ರಾಮಾಣಿಕವಾಗಿ ಬಯಸಿ ಅಳುತ್ತಾರೊ ಅವರಿಗೆ ದೇವರು ಕಂಡೇ ಕಾಣುತ್ತಾನೆ” ಎಂದು ಹೇಳಿದರು.

ಶ್ರೀರಾಮಕೃಷ್ಣರಿಗೆ ಅವರ ದಿವ್ಯಧ್ಯಾನ ಸಮಾಧಿಯ ಸಾಧನಾನುಭವಗಳ ಸಂದರ್ಭದಲ್ಲಿ, ತಮ್ಮ ಲೋಕಕಲ್ಯಾಣ ಕಾರ್ಯಕ್ಕಾಗಿ ನೆರವಾಗಲು ಸಿದ್ಧ ಮಹಾಪುರುಷ ಶಿಷ್ಯಾಗ್ರಣಿಯೋರ್ವನು ಬರುತ್ತಾನೆ ಎಂದು ಮನವರಿಕೆಯಾಗಿದ್ದು, ಆ ಧೀರ ಪುರುಷನ ಆಗಮನ, ಭೇಟಿಗಾಗಿ ಅವರು ಕಾದು ನಿಂತಿದ್ದರು. ನರೇಂದ್ರನು ತಮ್ಮ ಬಳಿಗೆ ಮೊದಲ ಬಾರಿಗೆ ಬಂದಾಗ, ಅವನನ್ನು ಕಂಡ ಕೂಡಲೇ ತಾವು ಹಿಂದೆ ಸಮಾಧಿಸ್ಥಿತಿಯಲ್ಲಿ ಕಂಡ ಮಹಾ ಚೇತನ ಪುರುಷನೇ ಈತನು ಎಂಬುದಾಗಿ ಸ್ಪಷ್ಟವಾಗಿ ಅವರಿಗೆ ಅಂತರಂಗದಲ್ಲಿ ಹೊಳೆಯಿತು. ನರೇಂದ್ರನು ಶ್ರೀರಾಮಕೃಷ್ಣರನ್ನು ಕಂಡು ಸಂತೋಷಗೊಂಡರೂ ಸಂತೃಪ್ತನಾಗಲಿಲ್ಲ. ಶ್ರೀರಾಮಕೃಷ್ಣರು ಅವನನ್ನು ತಮ್ಮ ಕೊಠಡಿಯಿಂದ ಹೊರಗಡೆ ಕರೆದುಕೊಂಡು ಪ್ರೀತಿಯಿಂದ ಮಾತನಾಡುತ್ತ, “ನನಗೆ ಪ್ರಾಪಂಚಿಕರ ಜೊತೆ ಮಾತನಾಡಿ ಸಾಕಾಗಿದೆ. ನನ್ನ ಅಂತರಾಳದ ದೈವಿಕವಾದ ಭಾವನೆಗಳನ್ನು ನಾನು ಯಾರಿಗೆ ಹೇಳಲಿ? ಅದಕ್ಕಾಗಿ ಆಸಕ್ತರು ಯಾರಿದ್ದಾರೆ?” ಎಂದು ಹೇಳಿ, ನರೇಂದ್ರನ ಮುಂದೆ ಶ್ರೀರಾಮಕೃಷ್ಣರು ಕೈಮುಗಿದು ನಿಂತು, “ದೇವಾ, ನೀನು ಯಾರೆಂದು ನನಗೆ ತಿಳಿದಿದೆ. ನೀನು ಭಗವನ್ನಾರಾಯಣನ ಅವತಾರವಾದ ಪುರಾತನ ಮಹರ್ಷಿ ನರ!” ಎಂದು ಹೇಳಿ, ಕೂಡಲೇ ಮತ್ತೆ ತಮ್ಮ ಕೊಠಡಿಗೆ ತೆರಳಿ ಕಲ್ಲುಸಕ್ಕರೆ, ಸಿಹಿತಿಂಡಿ ಮೊದಲಾದ ತಿನಿಸುಗಳನ್ನು ತಂದು ತಾವೇ ಸ್ವತಃ ಕೈಯಿಂದ ನರೇಂದ್ರನಿಗೆ ತಿನ್ನಿಸಿದರು. ಆಮೇಲೆ ಕೊಠಡಿಗೆ ಹಿಂತಿರುಗಿ ತೆರಳಿ ಅಲ್ಲಿ ನೆರೆದಿದ್ದ ಭಕ್ತರ ಜೊತೆ ಭಕ್ತಿಯ ಸಂಬಂಧವಾಗಿ ಮಾತುಕತೆ ಮುಂದುವರಿಸಿದರು. ಆ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ನರೇಂದ್ರನ ಮುಖವನ್ನು ನೋಡುತ್ತಾ ಭಕ್ತರ ಮುಂದೆ, “ನರೇಂದ್ರನ ಮುಖ ಅದೆಷ್ಟು ಶುಭ್ರ ಸುಂದರವಾಗಿ ಸರಸ್ವತಿ ತೇಜಸ್ಸಿನಿಂದ ಕೂಡಿ ಬೆಳಗುತ್ತಿದೆ” ಎಂದು ಹೇಳಿ ನರೇಂದ್ರನನ್ನು ಪ್ರೀತಿಯಿಂದ ದಿಟ್ಟಿಸಿ ನೋಡಿದರು. ಆ ಮೇಲೆ ನರೇಂದ್ರನೊಡನೆ, “ನೀನು ರಾತ್ರಿ ನಿದ್ದೆ ಹೋಗುವ ಮುನ್ನ ವಿಶೇಷವಾಗಿ ಒಂದು ಜ್ಯೋತಿಯನ್ನು ಕಾಣುತ್ತೀಯಾ?” ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ನರೇಂದ್ರನು ಹೌದೆಂದು ಹರ್ಷಭಾವದಿಂದ ಹೇಳಿದಾಗ ಶ್ರೀರಾಮಕೃಷ್ಣರು, “ನಾನು ನರೇಂದ್ರನ ಬಗ್ಗೆ ಭಾವಿಸಿದ ಎಲ್ಲ ವಿಚಾರಗಳೂ ಹೊಂದಾಣಿಕೆ ಆಗಿ ಕಂಡುಬರುತ್ತಿವೆ. ಇವನು ಹುಟ್ಟಿನಿಂದಲೇ ಧ್ಯಾನಸಿದ್ಧನಾಗಿದ್ದಾನೆ”ಎಂದು ಹಸನ್ಮುಖರಾಗಿ ಭಕ್ತರ ಮುಂದೆ ಹೇಳಿದರು.

ಹೀಗಿರುತ್ತಾ ಕಾಲವು ಸರಿಯಿತು. ತಿಂಗಳು ಒಂದಾಯಿತು. ನರೇಂದ್ರನು ಮತ್ತೆ ಶ್ರೀರಾಮಕೃಷ್ಣರ ದಿವ್ಯಜೀವನ – ಸಂಭಾಷಣೆಗಳಿಂದ ಆಕರ್ಷಿತನಾಗಿ, ಅವರನ್ನು ಭೇಟಿ ಆಗಲು ದಕ್ಷಿಣೇಶ್ವರಕ್ಕೆ ಎರಡನೆ ಬಾರಿ ಬಂದನು. ನರೇಂದ್ರನನ್ನು ಕಂಡೊಡನೆ, ಅವನಿಗೆ ತಮ್ಮ ಪಕ್ಕದಲ್ಲಿ ಬಂದು ಕುಳಿತುಕೊಳ್ಳುವಂತೆ ಹೇಳಿದರು. ನರೇಂದ್ರನು ಅದರಂತೆ ಬಂದು ಕುಳಿತಕೂಡಲೇ ಶ್ರೀರಾಮಕೃಷ್ಣರಿಗೆ ದಿವ್ಯಭಾವವು ಹೃದಯದಲ್ಲಿ ತುಂಬಿಬಂದು ನರೇಂದ್ರನನ್ನು ನೆಟ್ಟದೃಷ್ಟಿಯಿಂದ ನೋಡುತ್ತಾ ಕೂಡಲೇ ನರೇಂದ್ರನ ಶರೀರದ ಮೇಲೆ ತಮ್ಮ ಬಲಕಾಲನ್ನು ಇಟ್ಟರು. ಆ ದಿವ್ಯ ಪಾದಸ್ಪರ್ಶದಿಂದ ನರೇಂದ್ರನ ಅಂತರಂಗದಲ್ಲಿ ಅವರ್ಣನೀಯವಾದ ದಿವ್ಯಾನಂದದ ಅನುಭವವು ಉಂಟಾಯಿತು. ಅದಕ್ಕನುಗುಣವಾಗಿ ಎದುರಿಗಿದ್ದ

ಗೋಡೆ, ಕೊಠಡಿಯಲ್ಲಿದ್ದ ವಸ್ತುಗಳು – ಎಲ್ಲವೂ ಸುತ್ತುತ್ತಿರುವಂತೆ ಭಾಸವಾಗಿ, ಜಗತ್ತು ಅತಿವೇಗದಿಂದ ಸುತ್ತಿದಂತಾಗಿ, ನರೇಂದ್ರನು ಆ ದಿವ್ಯಾನುಭವದಿಂದಾಗಿ ತನ್ನನ್ನು ತಾನು ಹತೋಟಿಗೆ ತಂದು ಕೊಳ್ಳದಂತಾಗಿ, ತೀವ್ರ ಭಯದಿಂದ ಕಂಪಿಸುತ್ತಾ "ನನಗೇನು ಮಾಡಿಬಿಟ್ಟಿರಿ? ನನಗೆ ನನ್ನ ಮನೆ, ತಾಯಿ–ತಂದೆ, ಬಂಧುಗಳು ಎಲ್ಲ ಇದ್ದಾರೆ. ನನ್ನ ಗತಿ ಏನಾಗುತ್ತದೆ?" ಎಂದು ಹೇಳುತ್ತಾ ಅತ್ತುಬಿಟ್ಟನು.

ಆಗ ಶ್ರೀರಾಮಕೃಷ್ಣರು ಜೋರಾಗಿ ನಗುತ್ತಾ ನರೇಂದ್ರನ ಎದೆಯನ್ನು ಸ್ಪರ್ಶಿಸಿ, ಬೆರಳುಗಳಿಂದ ಮಿಡಿಯುತ್ತಾ, "ಸರಿ, ಆ ದಿವ್ಯಾನುಭವ ಇದೀಗ ಅಲ್ಲಿಗೇ ಸ್ತಬ್ಧವಾಗಲಿ. ಸಕಾಲದಲ್ಲಿ ಎಲ್ಲವೂ ಮೂಡಿಬರುತ್ತದೆ" ಎಂದು ಹೇಳಿ ನರೇಂದ್ರನನ್ನು ಹರಸಿದರು. ಆಗ ನರೇಂದ್ರನ ಆಂತರ್ಯದ ದಿವ್ಯಾನುಭವವು ಅಲ್ಲಿಗೆ ನಿಂತುಹೋಯಿತು.

ಸ್ವಲ್ಪ ಸಮಯ ಕಳೆಯಿತು. ಶ್ರೀರಾಮಕೃಷ್ಣರನ್ನು ನರೇಂದ್ರನು ಭೇಟಿಯಾಗಿ ಅನೇಕ ವಾರಗಳು ಸಂದವು. ಶ್ರೀರಾಮಕೃಷ್ಣರ ಭೇಟಿಗಾಗಿ ನರೇಂದ್ರನು ಉತ್ಸಾಹಿಯಾಗಿದ್ದನು. ಶ್ರೀರಾಮಕೃಷ್ಣರು ನರೇಂದ್ರನನ್ನು ಕಂಡು ಮಾತನಾಡಲು ತುಂಬ ವ್ಯಾಕುಲರಾಗಿದ್ದರು. ನರೇಂದ್ರನು ಅದರಂತೆ ದಕ್ಷಿಣೇಶ್ವರಕ್ಕೆ ಬಂದು, ಶ್ರೀರಾಮಕೃಷ್ಣರ ದರ್ಶನವನ್ನು ಮಾಡಿ ಗೌರವಾದರದಿಂದ ಕೂಡಿ ನಮಿಸಿದನು. ಶ್ರೀರಾಮಕೃಷ್ಣರು ಆ ದಿವಸ ನರೇಂದ್ರನನ್ನು ಕರೆದುಕೊಂಡು, ಅಲ್ಲೇ ಪಕ್ಕದಲ್ಲಿದ್ದ ಯದುಮಲ್ಲಿಕನ ಪುಷ್ಪೋದ್ಯಾನಕ್ಕೆ ತೆರಳಿದರು. ಅಲ್ಲಿ ಇಬ್ಬರೂ ಪ್ರೀತಿಯಿಂದ ಮಾತನಾಡುತ್ತಾ ಕುಳಿತುಕೊಂಡಾಗ ಶ್ರೀರಾಮಕೃಷ್ಣರು ದಿವ್ಯ ಸಮಾಧಿಭಾವವನ್ನು ಹೊಂದಿ ನರೇಂದ್ರನನ್ನು ಸ್ಪರ್ಶಿಸಿದರು. ಆ ಕೂಡಲೆ ನರೇಂದ್ರನು ಹೊರಪ್ರಪಂಚದ ಪ್ರಜ್ಞೆಯನ್ನು ಕಳೆದು ಕೊಂಡು ಅಂತರ್ಮುಖಿಯಾದನು. ಆಗ ಶ್ರೀರಾಮಕೃಷ್ಣರು ನರೇಂದ್ರನ ಆಂತರ್ಯವನ್ನು ತಮ್ಮ ದಿವ್ಯಶಕ್ತಿಯಿಂದ ಸಂಪರ್ಕಿಸಿ ಆತನ ಜನ್ಮದ ಹಿನ್ನೆಲೆ ಏನು, ಉದ್ದೇಶವೇನು? ಎಂಬಿತ್ಯಾದಿಯಾಗಿ ಆತನ ಜೀವನಕ್ಕೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ತಮ್ಮ ಯೋಗಶಕ್ತಿಯಿಂದ ಕೇಳಿ, ಸರಿಯಾದ ಉತ್ತರವನ್ನು ಪಡೆದರು. ನರೇಂದ್ರನನ್ನು ಕುರಿತಾದ ಭೂತ ಭವಿಷ್ಯತ್ತುಗಳನ್ನು ತಮ್ಮ ದೈವಿಕವಾದ ಯೋಗಶಕ್ತಿಯಿಂದ ತಿಳಿದಿದ್ದ ಶ್ರೀರಾಮಕೃಷ್ಣರಿಗೆ, ಈ ಪ್ರಶ್ನೋತ್ತರಗಳಿಂದ ಮತ್ತೊಮ್ಮೆ ದೃಢೀಕರಣವುಂಟಾಯಿತು.

ಈ ಹಿನ್ನೆಲೆಯೊಡನೆ ಶ್ರೀರಾಮಕೃಷ್ಣರಿಗೆ ಹಿಂದೊಮ್ಮೆ ತಾವು ಅಂತರಂಗದ ದಿವ್ಯಧ್ಯಾನದಲ್ಲಿ ಕಂಡ ತಮ್ಮ ಹಾಗೂ ನರೇಂದ್ರನ ಅವತಾರ ಉದ್ದೇಶಗಳ ಕುರಿತಾದ ವಿವರಗಳು ಏನು ಎಂಬುದನ್ನು ಅವರು ಸ್ವತಃ ಭಕ್ತರಿಗೆ ಸೂಚಕವಾಗಿ ತಿಳಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳುವುದು, ಸ್ವಾಮಿ ವಿವೇಕಾನಂದರನ್ನು ಶ್ರೀರಾಮಕೃಷ್ಣರು ಮೆಚ್ಚಿದ್ದೇಕೆ ಎನ್ನುವುದಕ್ಕೆ ಮತ್ತಷ್ಟು ನಿರ್ದಿಷ್ಟವಾದ ಉತ್ತರ ಪಡೆಯಲು ಸಹಕಾರಿ ಆಗಿರುತ್ತದೆ.

ಒಮ್ಮೆ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಎಂದಿನಂತೆ ದಿವ್ಯಧ್ಯಾನಾಸಕ್ತರಾಗಿ ಅಂತರ್ಮುಖಿಗಳಾದಾಗ, ಅವರಿಗೆ ಅಂತರಂಗದಲ್ಲಿ ಬ್ರಹ್ಮಾಂಡದ ದಿವ್ಯಲೋಕಗಳ ದರ್ಶನವಾಗಿ, ಅವರ ಮನಸ್ಸು ಮತ್ತೆ ಮತ್ತೆ ಮೇಲೇರಿ ಕೊನೆಗೆ ಸತ್ಯಲೋಕದ ನೆಲೆಯನ್ನು ಸೇರಿ, ಅಲ್ಲಿ ಸಮಾಧಿಮಗ್ನರಾಗಿದ್ದ ಏಳು ಮಂದಿ ಪರಮಪೂಜ್ಯ ಮಹರ್ಷಿಗಳ ದರ್ಶನವಾಯಿತು. ಪರಮಸತ್ಯದ ಸಾಕಾರಮೂರ್ತಿಗಳಂತಿದ್ದ ಆ ಸಪ್ತ ಋಷಿಗಳ ದಿವ್ಯತೆ ಹಾಗೂ ಅಧ್ಯಾತ್ಮ ವೈಭವದ ಮಹಾಬೆಳಕಿನಲ್ಲಿ ಕತ್ತಲೆಲ್ಲೂ ಇರಲಿಲ್ಲ. ಎಲ್ಲೆಡೆ ಸತ್ಯ – ಶಿವ – ಸೌಂದರ್ಯದ ಮಹಾಪ್ರಕಾಶ !

ಆ ಮಹಾಪ್ರಕಾಶವು ಒಂದೊಮ್ಮೆಗೆ ಸಾಕಾರಗೊಂಡ ಕೂಡಲೆ ಅಲ್ಲಿ ಒಂದು ದಿವ್ಯಶಿಶು ಗೋಚರವಾಯಿತು. ಆ ದಿವ್ಯಶಿಶುವು ಸಪ್ತ ಋಷಿಗಳ ಬಳಿ ಬಂದು, ಓರ್ವ ಋಷಿಗಳನ್ನು ಕೈಚಾಚಿ ಪ್ರೀತಿಯಿಂದ ತಬ್ಬಿಕೊಂಡಿತು! ಶಿಶುವಿನ ಆ ಪ್ರೀತಿಯ ಸ್ಪರ್ಶದಿಂದ ಋಷಿಯು ಸಮಾಧಿಸ್ಥಿತಿಯಿಂದ ಹೊರಬಂದು, ಶಿಶುವನ್ನು ತುಂಬು ಪ್ರೇಮದಿಂದ ದೃಷ್ಟಿಸಿ ನೋಡಿದರು. ಆಗ ಶಿಶುವು ಪರಮ ಹರ್ಷದಿಂದ ಕೂಡಿ ಋಷಿಗಳನ್ನು ನೋಡುತ್ತಾ ತಾನು ಕೆಳಲೋಕಕ್ಕೆ ತೆರಳುತ್ತೇನೆ ಎಂದೂ, ತನ್ನೊಡನೆ ಋಷಿಯು ಕೆಳಲೋಕಕ್ಕೆ ಖಂಡಿತ ಬರಬೇಕೆಂದೂ ಬಿನ್ನವಿಸಿಕೊಂಡಿತು.

ಆಗ ಆ ಮಹರ್ಷಿಯು ಆ ಶಿಶುವನ್ನು ನೆಟ್ಟದೃಷ್ಟಿಯಿಂದ ಮತ್ತೆ ಪ್ರೀತಿಪೂರ್ವಕವಾಗಿ ನೋಡುತ್ತಾ, ಆ ದಿವ್ಯ ನೋಟದಿಂದಲೇ ತನ್ನ ಒಪ್ಪಿಗೆಯನ್ನು ಸೂಚಿಸಿದನು. ಆ ಸಂದರ್ಭದಲ್ಲಿ ಶ್ರೀರಾಮಕೃಷ್ಣರ ಅಂತರಂಗದಲ್ಲಿ ಮಹರ್ಷಿಯ ಪಾವನ ದೇಹಾಂಶ ಹಾಗೂ ಮನಸ್ಸು ಎರಡೂ ಸೇರಿ ದಿವ್ಯಜ್ಯೋತಿ ಸ್ವರೂಪವಾಗಿ ಭೂಮಂಡಲಕ್ಕೆ ಇಳಿದು ಸಾಗುವುದು ಕಂಡುಬಂತು.

ನರೇಂದ್ರನನ್ನು ಪ್ರಥಮಬಾರಿಗೆ ಶ್ರೀರಾಮಕೃಷ್ಣರು ಕಂಡಾಗ ಸಪ್ತಋಷಿ ಮಂಡಲದಿಂದ ಇಳಿದು ಬಂದ ದಿವ್ಯಜ್ಯೋತಿಯೇ ನರೇಂದ್ರರೂಪದಲ್ಲಿ ನರಜನ್ಮ ತಳೆದು ಭುವಿಯಲ್ಲಿ ಬೆಳೆಯುತ್ತಿದ್ದಾನೆ ಎಂದು ಸ್ಪಷ್ಟವಾಯಿತು. ಮುಂದೆ ತಮ್ಮ ಅಂತರಂಗದ ಭಕ್ತರಿಗೆ ಪುಣ್ಯ ಋಷಿಮಂಡಲದಲ್ಲಿ ದಿವ್ಯಪ್ರಕಾಶದಿಂದ ಸಾಕಾರ ಮೂರ್ತಿಯಾಗಿ ರೂಪುಗೊಂಡ ದೇವಶಿಶುವೇ ಭುವಿಯಲ್ಲಿ ಶ್ರೀರಾಮಕೃಷ್ಣರಾಗಿ ಅವತರಿಸಿ ಲೀಲಾವೈಭವವನ್ನು ನಡೆಸಿರುತ್ತಾರೆ ಎಂಬುದನ್ನು ಶ್ರೀರಾಮಕೃಷ್ಣರು ಸ್ಪಷ್ಟಪಡಿಸಲಾಗಿ, ಅದು ಶ್ರೀರಾಮಕೃಷ್ಣರ ಅವತಾರಚರಿತೆಯಲ್ಲಿ ಮಹತ್ವದ ಒಂದು ಸುವರ್ಣ ದಾಖಲೆಯಾಗಿರುತ್ತದೆ.

ಹೀಗೆ, ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರನ್ನು ಮೆಚ್ಚಿಕೊಳ್ಳಲು ಭೌತಿಕ ಹಾಗೂ ಆಧ್ಯಾತ್ಮಿಕವಾದ ಮಹತ್ವದ ಕಾರಣಗಳು, ಅಪೂರ್ವವಾದ ಈ ವಿಶ್ವವಂದ್ಯ ಅಧ್ಯಾತ್ಮಿಕ ಗುರು –ಶಿಷ್ಯರ ಜೀವನದಲ್ಲಿ ಕಂಡುಬರುತ್ತದೆ. ಒಟ್ಟಿನಲ್ಲಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರಂತಹ ದಿವ್ಯ ಶಕ್ತಿಸಂಪನ್ನರಾದ ಧರ್ಮ ಸಂಸ್ಥಾಪನಾಚಾರ್ಯರು, ಸ್ವಾಮಿ ವಿವೇಕಾನಂದರಂತಹ ನಿಷ್ಠಾವಂತ ಗುರುಭಕ್ತರು ಹಾಗೂ ಯೋಗಸಿದ್ಧ ಮಹಾಪುರುಷರು, ಜ್ಞಾನವಂತರಾದ ಶಿಷ್ಯೋತ್ತಮರು – ಇವರು ಎಲ್ಲ ಕಾಲಕ್ಕೂ ಜಗತ್ತಿನಲ್ಲಿ ಸ್ಫೂರ್ತಿದಾಯಕವೂ ಅನುಗ್ರಹಪ್ರದವೂ ಆದ ಆಚಾರ್ಯ – ಶಿಷ್ಯ ಜೋಡಿಯಾಗಿ ನಿತ್ಯ ನೂತನವಾಗಿ ಬೆಳಗುತ್ತಿದ್ದು ಪ್ರಾತಃಸ್ಮರಣೀಯರಾಗಿರುತ್ತಾರೆ.

# ಶ್ರೀಶಂಕರಾಚಾರ್ಯರು ಮತ್ತು ಸ್ವಾಮಿ ವಿವೇಕಾನಂದರು

ಡಾ. ಎಚ್. ರಾಮಚಂದ್ರಸ್ವಾಮಿ

ಭಾರತ ಇತಿಹಾಸದ ಸಂದಿಗ್ಧ ಪರಿಸ್ಥಿತಿಗಳಲ್ಲಿ ಉದಯಿಸಿ ಬಂದು, ಈ ನಾಡಿನ ಸಂಸ್ಕೃತಿಯನ್ನು ರಕ್ಷಿಸಿ, ಹೊಸ ದಿಶೆಯನ್ನು ಕೊಟ್ಟವರೇ ಶ್ರೀಶಂಕರ ಮತ್ತು ಸ್ವಾಮಿ ವಿವೇಕಾನಂದರು. ಶಂಕರರ ಸೈದ್ಧಾಂತಿಕ ಅದ್ವೈತಕ್ಕೆ ಸಾಮಾಜಿಕ ಆಯಾಮವನ್ನೂ, ಮಾನವೀಯ ದೃಷ್ಟಿಕೋನವನ್ನೂ ತಂದುಕೊಟ್ಟವರು ಸ್ವಾಮಿ ವಿವೇಕಾನಂದರು. ಹಾಗೆಯೇ, ಅದ್ವೈತದ ಪರಿಧಿಯನ್ನು ಅವರು ವಿಸ್ತರಿಸಿ, ಸರ್ವಾಂಗೀಣ ಸಿದ್ಧಾಂತವನ್ನಾಗಿ ಆಧುನಿಕ ಕಾಲದಲ್ಲಿ ರೂಪಿಸಿದರು. ಈ ಅಂಶವನ್ನು ವಿದ್ವತ್ಪೂರ್ಣವಾಗಿ ಚರ್ಚಿಸಿರುವ ಲೇಖಕರು ಶೃಂಗೇರಿಯ ಕಾಲೇಜೊಂದರಲ್ಲಿ ಅಧ್ಯಾಪಕರಾಗಿದ್ದರು. ಮೈಸೂರು ಆಶ್ರಮವು ಪ್ರಕಟಿಸಿರುವ ಹಲವಾರು ಗ್ರಂಥಗಳ ಅನುವಾದ ಕಾರ್ಯವನ್ನು ಮಾಡಿಕೊಟ್ಟಿದ್ದ ಶ್ರೀಯುತರು, ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು.



ಹತ್ತೊಂಬತ್ತನೆಯ ಶತಮಾನದಲ್ಲಿನ ಪುನರುತ್ಥಾನದ ಪ್ರಾರಂಭದಲ್ಲಿ ಅದ್ವೈತವು ಪ್ರತಿಗಾಮಿ ತತ್ತ್ವವೆಂಬ ತಿರಸ್ಕಾರಕ್ಕೆ ಒಳಗಾಗಿತ್ತು. ತನ್ನ 'ಸುಧಾರಿತ ಹಿಂದೂಧರ್ಮ'ಕ್ಕೆ ವೇದಾಂತವನ್ನು ತಾತ್ತ್ವಿಕ ತಳಹದಿಯನ್ನಾಗಿ ಮಾಡಿಕೊಂಡ ರಾಜಾ ರಾಮಮೋಹನ ರಾಯನೇ ೧೮೨೩ರಲ್ಲಿ ಲಾರ್ಡ್ ಅಮ್‌ಹರ್ಸ್ಟ್‌ಗೆ ಬರೆದ ಪತ್ರದಲ್ಲಿ "ಜೀವಾತ್ಮವು ದೇವರಲ್ಲಿ ಐಕ್ಯವಾಗುವುದಾದರೂ ಹೇಗೆ? ವೇದಾಂತದ ಇಂತಹ ಊಹೆಗಳಿಂದ ಸಾಧಿತವಾಗುವುದಾದರೂ ಏನು? ಕಣ್ಣಿಗೆ ಕಾಣುವುದೆಲ್ಲವೂ ಅಸ್ತಿತ್ವವಿಲ್ಲದವು ಎಂದು ಹೇಳುವಂತಹ ವೇದಾಂತಬೋಧನೆಯಿಂದ ತರುಣರು ಸಮಾಜದಲ್ಲಿ ಸಭ್ಯಸದಸ್ಯರಾಗಿ ಹೊಂದಿಕೊಳ್ಳುವುದು ಸಾಧ್ಯವಿದೆಯೆ?" ಎಂದು ಅದ್ವೈತವನ್ನು ಹೀಗಳೆದಿದ್ದಾನೆ.

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸಹ ಅದ್ವೈತದ ಪ್ರಭಾವ ಬಂಗಾಳದ ಧಾರ್ಮಿಕ ಜೀವನದಲ್ಲಿ ಅಷ್ಟಾಗಿ ಕಂಡುಬರಲಿಲ್ಲ. ಬ್ರಹ್ಮಸಮಾಜದ ಅಧ್ವರ್ಯು ದೇವೇಂದ್ರನಾಥ ಠಾಕೂರ್ "ನಮಗೆ ವೇದಾಂತ ತತ್ತ್ವದಲ್ಲಿ ನಂಬಿಕೆಯಿಲ್ಲ; ಏಕೆಂದರೆ ಶಂಕರಾಚಾರ್ಯರು ಬ್ರಹ್ಮ ಹಾಗೂ ಸೃಷ್ಟಿಯಲ್ಲಿನ ಎಲ್ಲ ವಸ್ತುಗಳೂ ಒಂದೇ ಎಂದು ಸಾಧಿಸಲು ಪ್ರಯತ್ನಿಸುತ್ತಾರೆ. ದೇವರನ್ನು ಪೂಜಿಸುವುದು ನಮಗೆ ಅಗತ್ಯ" ಎಂದು ಹೇಳಿದ್ದಾರೆ.

ಸ್ವಾಮಿ ವಿವೇಕಾನಂದರು ಶಂಕರಾಚಾರ್ಯರ ಈ ತಾತ್ತ್ವಿಕ ನಿಲುವಿಗೆ ಹೇಗೆ ಪ್ರತಿಕ್ರಿಯಿಸಿದ್ದಾರೆ? ನಮ್ಮ ವೇದಾಂತ ಸಾಹಿತ್ಯದಲ್ಲಿ ಹಾಗೂ ಪಾಶ್ಚಿಮಾತ್ಯ ತತ್ತ್ವಚಿಂತನೆಯಲ್ಲಿ ಪರಿಣತರಾಗಿದ್ದರೂ ಸ್ವಾಮಿಜಿಯವರು ತಮ್ಮದೇ ಆದ ಒಂದು ಹೊಸ ತಾತ್ತ್ವಿಕ ಸಿದ್ಧಾಂತವನ್ನು ರೂಪಿಸಹೊರಡಲಿಲ್ಲ. ಶಂಕರರ ಅದ್ವೈತವನ್ನೇ ನವೀನಕಾಲಕ್ಕೆ ಹೊಂದುವಂತೆ, ಹೊಸ ರೀತಿಯ ಚಿಂತನೆಗೆ ಅನ್ವಯವಾಗುವಂತೆ ಪ್ರತಿಪಾದಿಸಿದರು. ವಿವೇಕಾನಂದರು ಹುಟ್ಟಿದ್ದು ಶಂಕರರ ನಂತರ ಹನ್ನೆರಡು ಶತಮಾನಗಳು ಕಳೆದ ಮೇಲೆ; ಅದೂ ಸಂಪೂರ್ಣ ಭಿನ್ನವಾದ ಪರಿಸರದಲ್ಲಿ. ಲೋಕಜೀವನದ ಬಗೆಗಿನ ನವೀನದೃಷ್ಟಿಯನ್ನೂ ಶಂಕರರ ಆಧ್ಯಾತ್ಮಿಕ ದೃಷ್ಟಿಯನ್ನೂ ವಿವೇಕಾನಂದರು ಒಂದಾಗಿಸಿರುವರು; ನವಯುಗದ ಜೀವನವನ್ನು ಆಧ್ಯಾತ್ಮಿಕವಾಗಿಸುವುದು ಹೇಗೆ ಎಂಬುದಕ್ಕೇ ಪ್ರಾಮುಖ್ಯತೆಯನ್ನು ಕೊಟ್ಟಿರುವರು. ಆಧ್ಯಾತ್ಮಿಕ ತಳಹದಿಯ ಮೇಲೆ ಮಾನವೀಯತೆಯ ಪುನರ್ನಿರ್ಮಾಣ ಮಾಡಬಯಸಿದರು ವಿವೇಕಾನಂದರು.

ಬಹಳ ಕಾಲ ಅವನತಮುಖವಾಗಿದ್ದ ವೈದಿಕಧರ್ಮವನ್ನು ಶಂಕರಾಚಾರ್ಯರು ಮೊದಲಿದ್ದಂತೆ ಪರಿಶುದ್ಧಗೊಳಿಸಿ ಪುನಃ ಸ್ಥಾಪಿಸಿದರೆ, ಇಂದಿನ ಯುಗದಲ್ಲಿ ವಿವೇಕಾನಂದರು ಮಾಡಿದ್ದೂ ಅದನ್ನೇ. ವೇದಗಳ ಪ್ರಾಮಾಣ್ಯವನ್ನು ಬುದ್ಧ ಒಪ್ಪಲಿಲ್ಲವಷ್ಟೆ ; ಆದರೆ ಶಂಕರ ವಿವೇಕಾನಂದ ಇಬ್ಬರೂ ವೇದಗಳನ್ನು ಇಂದ್ರಿಯಾತೀತ ಜ್ಞಾನದ ಆಗರವೆಂದು ಒಪ್ಪಿದರು; ವೈಚಾರಿಕತೆಗೆ ಹೊರತಾಗಿಲ್ಲವೆಂಬುದನ್ನು ಕಂಡುಕೊಂಡರು. ಬುದ್ಧನು ಹಿಂದೂಧರ್ಮದ 'ಬಂಡಾಯಕೋರ' ಮಗುವಾದರೆ, ಶಂಕರ–ವಿವೇಕಾನಂದರನ್ನು ನಿಷ್ಠಾವಂತ ಮಕ್ಕಳೆನ್ನಬಹುದು; ಇಬ್ಬರಿಗೂ ಸಕಾರಣವಾಗಿಯೇ ಹಿಂದೂಧರ್ಮದ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಹೆಮ್ಮೆಯಿತ್ತು.

ಜನ್ಮತಃ ಮಾನವತಾಪ್ರೇಮಿಯಾಗಿದ್ದ ವಿವೇಕಾನಂದರು ವ್ಯಕ್ತಿಶಃ ಶಂಕರರಿಗಿಂತಲೂ ದಯಾಪೂರ್ಣ ಬುದ್ಧನನ್ನೇ ಹೆಚ್ಚು ಮೆಚ್ಚಿದವರು. ಅವರು ಶಂಕರರ ಆಧ್ಯಾತ್ಮಿಕ ಆದರ್ಶವನ್ನೂ ಬುದ್ಧನ ಚೈತನ್ಯಶೀಲ ಭಾವವನ್ನೂ ಒಂದುಗೂಡಿಸಿಕೊಂಡರು. ಅವರಲ್ಲಿ ನಾವು ಶಂಕರರ ಬುದ್ಧಿಪ್ರಖರತೆಯನ್ನೂ ಬುದ್ಧನ ಭಾವತೀವ್ರತೆಯನ್ನೂ ಒಟ್ಟಿಗೆ ನೋಡಬಹುದು.

೧೮೯೩ರಲ್ಲಿ ವಿವೇಕಾನಂದರು ಶಂಕರರ ಹಾಗೂ ಅದ್ವೈತದ ಬಗ್ಗೆ ಮಾತನಾಡಲಾರಂಭಿಸಿದಾಗ, ಶಂಕರಾಚಾರ್ಯರು ಸ್ವದೇಶ ಬಾಂಧವರಲ್ಲಿ ಅಷ್ಟಾಗಿ ಪರಿಗಣಿತವಾಗದೆ ಇರುವವರೆಂಬುದು ಅವರಿಗೆ ತಿಳಿದಿತ್ತು. ಆದರೂ ವಿವೇಕಾನಂದರು ತಮ್ಮ ವೇದಾಂತ ತತ್ತ್ವವನ್ನು ಪ್ರಚುರಪಡಿಸಲು ಶಂಕರರ ಕಡೆ ಏಕೆ ತಿರುಗಿ ನೋಡಿದರು? **ಜೀವೋ ಬ್ರಹ್ಮೈವ ನಾಪರಃ** – ಎಂದರೆ 'ಜೀವನು ಬ್ರಹ್ಮನೇ, ಬೇರೆಯಲ್ಲ' ಎಂಬ ಅವರ ಕಲ್ಪನೆಯಿಂದ

ವಿವೇಕಾನಂದರು ಆಕರ್ಷಿತರಾದರು. ನಮ್ಮ ಆಧ್ಯಾತ್ಮಿಕ ಇತಿಹಾಸದಲ್ಲಿ ಶಂಕರರನ್ನು ಚಿರಂಜೀವಿಯಾಗಿಸಿದ್ದೇ ಮಾನವನ ದಿವ್ಯತೆಯ ಈ ಕಲ್ಪನೆ. ವಿವೇಕಾನಂದರು ಇದರಲ್ಲಿ ಒಂದು ಬಗೆಯ ಮಾನವೀಯತೆಯ ಅತಿಶಯವನ್ನು ಕಂಡರು; ಏಕೆಂದರೆ ಇದು ಮಾನವನನ್ನು ಮುಗಿಲಿನೆತ್ತರಕ್ಕೆ ಏರಿಸಬಲ್ಲ ಆಧ್ಯಾತ್ಮಿಕ ಸಾಧ್ಯತೆ. ಶಂಕರರ ಬಗ್ಗೆ ವಿವೇಕಾನಂದರು ಗೌರವ ತಾಳುವುದಕ್ಕೆ ಇನ್ನೊಂದು ಕಾರಣವೂ ಇದೆ. ದ್ವೈತವಾದಿಗಳಾದವರಿಗೂ ಸಹ ಸಗುಣಬ್ರಹ್ಮನ ಕಲ್ಪನೆಯ ಮೂಲಕ ಒಂದು ಸ್ಥಾನವನ್ನು ಅವರು ಕಲ್ಪಿಸಿಕೊಟ್ಟಿದ್ದಾರೆ. ಮೂಲಭೂತವಾಗಿ ಏಕತೆಯು, ಅದ್ವೈತದ, ನಿಲುವಾದರೂ, ಶಂಕರರ ವಾದವ್ಯವಸ್ಥೆಯಲ್ಲಿ ದೈವಚಿಂತನೆಗೂ ಅವಕಾಶವಿದೆ. ಡಾ. ಎಸ್. ರಾಧಾಕೃಷ್ಣನ್ ಹೇಳುವಂತೆ, "the reality of Ishwara, in Shanakara's philosophy, is not a self-evident axiom, is not a logical truth, but an empirical postulate which is practically useful." (ಶಂಕರರ ತತ್ವಶಾಸ್ತ್ರದಲ್ಲಿ ಈಶ್ವರನೆಂಬ ಸತ್ಯವು ಸ್ವತಃಸಿದ್ಧ ಪ್ರಮಾಣವಲ್ಲ ಅಥವಾ ತಾರ್ಕಿಕ ಸತ್ಯವಲ್ಲ, ಬದಲಿಗೆ ವಾಸ್ತವಿಕವಾಗಿ ಉಪಯೋಗಕ್ಕೆ ಬರುವ ಒಂದು ಅನುಭವಸಿದ್ಧ ತಾತ್ಪೂರ್ತಿಕ ಕಲ್ಪನೆಯಾಗಿದೆ.) ಕ್ರಿಯಾಕರಣಗಳನ್ನೂ ಪುರೋಹಿತಶಾಹಿಯನ್ನೂ ಸಾರಾಸಗಟಾಗಿ ತಿರಸ್ಕರಿಸಿದ ಬ್ರಹ್ಮಸಮಾಜದವರಿಗೆ ಬೆಂಬಲವನ್ನು ಕೊಟ್ಟಿದ್ದೇ ಶಂಕರರ ಈ ದೈವಕಲ್ಪನೆ. ಅಲ್ಲದೆ ವಿವೇಕಾನಂದರು ಶಂಕರಾಚಾರ್ಯರಲ್ಲಿ ವೇದಾಂತದ ಒಂದು ಪುನರುತ್ಥಾನವನ್ನು ಕಂಡರು. ಸಾಮಾನ್ಯ ಬೌದ್ಧಿಕ ಮಟ್ಟದವರಿಗೆ ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ಭಗವದ್ಗೀತೆ ಎಂಬ ಪ್ರಸ್ಥಾನತ್ರಯಗಳಲ್ಲಿ ಚಿಂತನೆಯ ಸ್ರೋತವೊಂದನ್ನು ಕಾಣುವುದು ಕಷ್ಟ. ಶಂಕರರು ಇವುಗಳಿಗೆ ಬರೆದ ತಮ್ಮ ಭಾಷ್ಯಗಳಲ್ಲಿ ಇಂತಹ ಏಕಸ್ರೋತವನ್ನು ತಂದಿರುವುದನ್ನು ವಿವೇಕಾನಂದರು ಮನಗಂಡರು.

ಈ ಕಾರಣಕ್ಕಾಗಿಯೇ ಪಾಶ್ಚಾತ್ಯ ಪಂಡಿತರುಗಳು ಶಂಕರಾಚಾರ್ಯರನ್ನು ಹಿಂದೂಧರ್ಮದ ಅರಿಸ್ಟಾಟಲ್ ಅಥವಾ ಥಾಮಸ್ ಆಕ್ವಿನಾಸ್ ಎಂದು ಕರೆದಿರುವರು. ಹೊಸ ಮತವನ್ನು ಸ್ಥಾಪಿಸದಿದ್ದರೂ, ಶಂಕರರು ಹೊಸದೊಂದು ತಾತ್ತ್ವಿಕ ಆಂದೋಳನವನ್ನು ಹುಟ್ಟುಹಾಕಿದುದಂತೂ ಖಂಡಿತ. ಶಂಕರರ ಈ ವೇದಾಂತ ಪುನರುತ್ಥಾನದ ತಳಹದಿಯ ಮೇಲೆ ತಾನೂ ತನ್ನ ಕಾಲದಲ್ಲಿ ಇನ್ನೊಂದು ಬಗೆಯಲ್ಲಿ ವೇದಾಂತವನ್ನು ಪುನರುಜ್ಜೀವನಗೊಳಿಸಲು ಉದ್ದೇಶಿಸಿರುವೆ, ಅದಕ್ಕೆ ಹೊಸದೊಂದು ಆಯಾಮವನ್ನು ಕೊಡಲಿರುವೆ ಎಂದು ಅನೇಕ ಸಂದರ್ಭಗಳಲ್ಲಿ ವಿವೇಕಾನಂದರು ಹೇಳಿಯೂ ಹೇಳಿರುವರು.

ಶಂಕರಾಚಾರ್ಯರ ಬಗ್ಗೆ ವಿವೇಕಾನಂದರು ನುಡಿದಿರುವ ನೂರಾರು ಮಾತುಗಳಿವೆ. ಅವುಗಳಲ್ಲಿ ಮುಖ್ಯವಾದುದೆಂದರೆ ಇದು: "ಶಂಕರಾಚಾರ್ಯರಿಗೆ ವೇದಗಳ ಉಚ್ಚಾರಣೆಯ ರಾಷ್ಟ್ರೀಯ ಸ್ವರ–ಲಯಗಳ ಜ್ಞಾನವಿದ್ದಿತು. ನನಗೆ ಬಾಲ್ಯದಲ್ಲಿ ಕಂಡಂತೆ ಅವರಿಗೂ ಒಂದು ದೃಶ್ಯ ಕಂಡಿರಬೇಕು; ಅದರಿಂದ ಅವರು ಆ ಪೂರ್ವಕಾಲದ ವೇದಗಾಯನವನ್ನು ಕಲಿತರು ಎಂದು ನಾನು ಅನೇಕ ವೇಳೆ ಕಲ್ಪಿಸಿಕೊಳ್ಳುತ್ತೇನೆ. ಹೇಗಾದರೂ ಆಗಲಿ, ಅವರ ಇಡೀ ಜೀವನ–ಸಾಧನೆ ಎಲ್ಲವೂ ವೇದೋಪನಿಷತ್ತುಗಳ ದಿವ್ಯ ಸೌಂದರ್ಯದಿಂದ ಅನುರಣಿತವಾಗಿವೆ." ಇಲ್ಲಿ ವಿವೇಕಾನಂದರು ಶಂಕರರ ತತ್ತ್ವವನ್ನು ಕುರಿತು ಏನನ್ನೂ ಹೇಳಿಲ್ಲ; ಅದ್ವೈತದ ಹೆಸರನ್ನೇ ಎತ್ತಿಲ್ಲ. ರಾಷ್ಟ್ರದ ಪ್ರಾಚೀನ ಆತ್ಮಸಂಗೀತದ ಗ್ರಹಿಕೆಗೆ ಕಾರಣವಾದ ದರ್ಶನವೊಂದರ ಸಾಧ್ಯತೆಯನ್ನು ಕುರಿತು ಹೇಳುತ್ತಾರೆ. ಭಾರತದ ಆಧ್ಯಾತ್ಮಿಕ ಭವಿಷ್ಯವನ್ನು ಕುರಿತಾದ ಶಂಕರರ ದರ್ಶನ ವಿವೇಕಾನಂದರ ಗಮನವನ್ನು ಸೆಳೆದಿದೆ; ತಾವೂ ಇಂತಹ ದರ್ಶನವನ್ನು ಕಂಡು ಕೆಲಸಮಾಡುತ್ತಿರುವವರಾದ್ದರಿಂದ ಶಂಕರರಲ್ಲಿ ಅವರು ಸಾದೃಶ್ಯವನ್ನು ಕಂಡಿದ್ದಾರೆ.

ವಿವೇಕಾನಂದರು, ಅವನತಮುಖವಾಗಿದ್ದ ಬೌದ್ಧಧರ್ಮದಲ್ಲಿ ಹಾಗೂ ಹಿಂದೂ ಕ್ರಿಯಾಕರಣಗಳಲ್ಲಿ ಕಳೆದುಹೋದ ಅಧ್ಯಾತ್ಮ ವೈಭವವನ್ನು ಪುನಃ ಪ್ರತಿಷ್ಠಾಪಿಸಿದ ಚರಿತ್ರಾರ್ಹ ಪುರುಷರೆಂದು ಶಂಕರರನ್ನು ಹೊಗಳುತ್ತಾರೆ. ಆದರೆ ಅವರ ಅನುಯಾಯಿ ತಾವೆಂದು ಎಲ್ಲಿಯೂ ಹೇಳಿಕೊಳ್ಳುವುದಿಲ್ಲ. ಅದ್ವೈತದಲ್ಲಿ ನಂಬಿಕೆಯುಳ್ಳವರಾದರೂ ಆ ಮತಕ್ಕೆ ಕಟ್ಟುಬೀಳಲು ಅವರು ಇಷ್ಟಪಡಲಿಲ್ಲ. ತಮ್ಮ ಜ್ಞಾನಯೋಗದಲ್ಲಿ ಅವರು ಹೇಳುತ್ತಾರೆ: "ಶಂಕರಾಚಾರ್ಯರೇ ವೇದಾಂತ ತತ್ತ್ವದ ಮಹಾನ್ ಪ್ರಬೋಧಕರು. ಘನವಾದ ತರ್ಕದ ಸಹಾಯದಿಂದ ಅವರು ವೇದಗಳಿಂದ ವೇದಾಂತ ತತ್ತ್ವಗಳನ್ನು ಹೆಕ್ಕಿ ತೆಗೆದು, ಅದರ ಆಧಾರದ ಮೇಲೆ ತಮ್ಮ ಭಾಷ್ಯಗಳಲ್ಲಿ ಪ್ರತಿಪಾದಿಸಿರುವ ಆ ಅಚ್ಚರಿಯ ಜ್ಞಾನ ಮಾರ್ಗವನ್ನು ನಿರ್ಮಿಸಿದರು. ಬ್ರಹ್ಮವನ್ನು ಕುರಿತ ಪರಸ್ಪರ ವಿರೋಧಿಯಾಗಿದ್ದ ವಿವರಣೆಗಳನ್ನೆಲ್ಲ ಒಂದಾಗಿಸಿ, ಇರುವುದೆಲ್ಲ ಒಂದೇ ಅನಂತ ಸತ್ಯ ಎಂಬುದನ್ನು ತೋರಿಸಿಕೊಟ್ಟರು."

ವಿವೇಕಾನಂದರು ಶಂಕರರ ಬಗ್ಗೆ ಉತ್ಸಾಹ ತಾಳುವುದಕ್ಕೆ ಇನ್ನೊಂದು ಕಾರಣವೆಂದರೆ ಶಂಕರರು ಭಗವದ್ಗೀತೆಯನ್ನು ವೇದಾಂತಗ್ರಂಥವೆಂದು ಪರಿಗಣಿಸಿದುದು. 'The Vedanta in all its Phases' ಎಂಬ ಉಪನ್ಯಾಸದಲ್ಲಿ ಅವರೆನ್ನುತ್ತಾರೆ: "ಗೀತೆಯನ್ನು ಪ್ರಚುರಗೊಳಿಸಿದ್ದು ಶಂಕರಾಚಾರ್ಯರ ದೊಡ್ಡ ಹಿರಿಮೆ. ಅವರ ಕೀರ್ತಿ ಇದರ ಮೇಲೆ ನಿಂತಿದೆ. ಗೀತೆಯ ಮೇಲೆ ಅವರು ಅತಿ ಸುಂದರವಾದ ವ್ಯಾಖ್ಯಾನವನ್ನು ಬರೆದರು. ಈ ಮಹಾಪುರುಷರು ತಮ್ಮ ಮಹಾನ್ ಜೀವನದಲ್ಲಿ ಮಾಡಿದ ಅದ್ಭುತ ಕಾರ್ಯಗಳಲ್ಲಿ ಇದೂ ಒಂದು – ಗೀತೆಯ ಮೇಲೆ ಅತ್ಯಂತ ಸುಂದರವಾದ ವ್ಯಾಖ್ಯಾನವನ್ನು ಬರೆದುದು ಮತ್ತು ಅದನ್ನು ಪ್ರಚುರಪಡಿಸಿದ್ದು." ಬಹುಶಃ ಗೀತಾಭಾಷ್ಯದ ಅವತರಣಿಕೆಯಲ್ಲಿ ಶಂಕರರು, "ಗೀತೆಯೆಂಬ ಶ್ರುತಿಯು ಎಲ್ಲ ವೇದಗಳ ಬೋಧನೆಯ ಸಾರವಾಗಿದೆ" ಎಂದು ಹೇಳಿರುವುದರಿಂದ ವಿವೇಕಾನಂದರು ಪ್ರಭಾವಿತರಾಗಿರಬೇಕು. ಅಲ್ಲದೆ ಗೀತಾಭಾಷ್ಯವನ್ನು ವಿವೇಕಾನಂದರೆನ್ನುವಂತೆ, "ಭಾರತದಲ್ಲಿನ ಸನಾತನ ಸಿದ್ಧಾಂತದ ಸಂಸ್ಥಾಪಕರೆಲ್ಲಾ ಅನುಸರಿಸುವರು."

ಶ್ರೀರಾಮಕೃಷ್ಣರು ಶಂಕರಾಚಾರ್ಯರ ಭಾಷ್ಯಗಳನ್ನು ಓದಿರದಿದ್ದರೂ, ಅವುಗಳಲ್ಲಿ ಅಡಗಿರುವ ಗಹನ ತತ್ತ್ವದ ಸಾರವನ್ನು ಬಲ್ಲವರಾಗಿದ್ದರು. ಶ್ರೀರಾಮಕೃಷ್ಣ ವಚನವೇದದಲ್ಲಿ ಸುಮಾರು ಇಪ್ಪತ್ತು ಕಡೆ ಶಂಕರರ ಹೆಸರು ಬಂದಿದೆಯಾದರೂ, ಶ್ರೀರಾಮಕೃಷ್ಣರು ಅವರ ಅದ್ವೈತದ ಮಾತನ್ನು ಎಲ್ಲಿಯೂ ಎತ್ತಿಲ್ಲ. ಜನಗಳಿಗೆ ದೀಪ್ತಿಯನ್ನು ತಂದುಕೊಡುವುದಕ್ಕಾಗಿ ಶಂಕರಾ